# ಮಾದಿಗ ಜನಾಂಗದ ಮಾದಾರ ದೂಳಯ್ಯನ ಸಾಮಾಜಿಕ ಕಾಳಜಿ

**ಗಿರಿಯಪ್ಪ ಎನ್. ಜಿ.**
ಸಂಶೋಧನಾ ವಿದ್ಯಾರ್ಥಿ
ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ.

**Article Link: https://aksharasurya.com/2023/12/giriyappa-n-g/**

## ABSTRACT:

12 ಶತಮಾನದಲ್ಲಿ ಮಾದಾರ ಚೆನ್ನಯ್ಯ ಚೋಳನ ಆಸ್ಥಾನದಲ್ಲಿ ಕುದುರೆಗಳಿಗೆ ಪ್ರತಿ ನಿತ್ಯ ಹುಲ್ಲನ್ನು ತರುವ ಕಾಯಕವನ್ನು ಮಾಡುತ್ತಿದ್ದನು. ಚೆನ್ನಯ್ಯನು ಶ್ರೇಷ್ಠವಾದ ಗುಪ್ತ ರೀತಿಯ ಶಿವಭಕ್ತಿ ಹೊಂದಿದ್ದು, ಇವನ ಭಕ್ತಿಯನ್ನು ಮೆಚ್ಚಿ, ಕೈಲಾಸದಲ್ಲಿನ ಶಿವನು ಚೆನ್ನಯ್ಯನ ಮನೆಗೆ ಬಂದು ಇಬ್ಬರು ಒಟ್ಟಿಗೆ ಕೂತುಕೊಂಡು ಶಿವ ಚೆನ್ನಯ್ಯನ ಮನೆಯ ಅಂಬಲಿ ರುಚಿಗೆ ಮಾರು ಹೋಗುತ್ತಾನೆ. ಇದಕ್ಕಿಂತ ಸವಿಯಾದ ರುಚಿ ಮತ್ತೆಲ್ಲೂ ಸೇವಿಸಿಲ್ಲವಲ್ಲ ಎಂದು ಕೊಳ್ಳುತ್ತಾನೆ. ಇಲ್ಲಿ ಶಿವನನ್ನೆ ಚೆನ್ನಯ್ಯನು ತನ್ನ ಮನೆ ಬಾಗಿಲಿಗೆ ಕರೆಸಿಕೊಂಡನು. 12ನೇ ಶತಮಾನದಲ್ಲಿ ಮಾದಾರ ದೂಳಯ್ಯನು ಒಬ್ಬ ಬ್ರಾಹ್ಮಣನಿಗೆ ಇದ್ದ ಕುಷ್ಠರೋಗವನ್ನ ಅವನ ಮನೆಯ ಬಚ್ಚಲು ನೀರು ಗುಣಪಡಿಸುತ್ತದೆ. ಅದೇ ರೀತಿ ಈ ವಿಷಯ ತಿಳಿದ ಇನ್ನಿತರೆ ಬ್ರಾಹ್ಮಣ ಕುಟುಂಬದವರು ಮಾದಾರ ದೂಳಯ್ಯನ ಬಚ್ಚಲು ನೀರನ್ನು ಮೈಮೇಲೆ ಹಾಕಿಸಿಕೊಂಡು ಅವರಿಗಿದ್ದ ಇತರೆ ಚರ್ಮಸಂಬಂಧ ರೋಗಗಳನ್ನು ದೂರ ಮಾಡಿಕೊಳ್ಳುತ್ತಾರೆ. ಆ ಮೂಲಕ ಮಾದಿಗ ಜನಾಂಗದ ಮಾದಾರ ದೂಳಯ್ಯನು ಅಂದಿನ ದಿನಗಳಲ್ಲಿ ಬರುತ್ತಿದ್ದ ರೋಗಗಳಿಗೆ ಮದ್ದು ನೀಡಿದ್ದಾನೆ. ಆ ಮೂಲಕ ಮುಂದಿನ ವಚನಕಾರರಿಗೆ ದಾರಿದೀಪವಾಗುತ್ತಾನೆ.

## KEY WORDS:

ಮಾದಿಗ, ಗುಪ್ತ ಮಾದಾರ, ಅಂಬಲಿ, ಕುಷ್ಟ ರೋಗ, ಚರ್ಮ, ವಚನಕಾರ, ದೂಳಯ್ಯ, ಬ್ರಾಹ್ಮಣ.

"ಮಾದಾರ ದೂಳಯ್ಯ ಹೆಸರೇ ಸೂಚಿಸುವಂತೆ ಮಾದಿಗ ಜಾತಿಗೆ ಸೇರಿದ ವಚನಕಾರನು. 'ಕಾಮಧೂಮ ಧೂಳೇಶ್ವರ' ಎಂಬ ಅಂಕಿತವನ್ನಿಟ್ಟುಕೊಂಡು ವಚನಗಳನ್ನು ಬರೆದ ಧೂಳಯ್ಯ ಸಾಮಾಜಿಕವಾಗಿ ತೀವ್ರ ಶೋಷಣೆಗೊಳಗಾದವನು. ಉರಿಲಿಂಗಪೆದ್ದಿಯನ್ನು ಬಿಟ್ಟರೆ ಅಸ್ಪೃಶ್ಯ ವಚನಕಾರರಲ್ಲಿಯೇ ಹೆಚ್ಚಿನ ಸಂಖ್ಯೆಯ

ವಚನಗಳನ್ನು ಬರೆದಿದ್ದಾನೆ. ನೂರಾರು ವಚನಗಳನ್ನು ಬರೆದಿರುವ ಧೂಳಯ್ಯನು ಪಾದರಕ್ಷೆಗಳನ್ನು ಹೊಲೆಯುವ ಕಾಯಕ ಮಾಡುತ್ತಿದ್ದನು."[1] ಇವರು ಗುಲ್ಬರ್ಗ ಜಿಲ್ಲೆ ಸೇಡಂ ತಾಲ್ಲೂಕು, ಬಿಜಹಳ್ಳಿ ಗ್ರಾಮದಲ್ಲಿ ಜನಿಸಿದವರು. ಮಾದಾರ ಧೂಳಯ್ಯನವರ ತಂದೆ ಕಕ್ಕಯ್ಯ, ತಾಯಿ ನುಲಿ ದೇವಿ ಹಾಗೂ ಹೆಂಡತಿ ದಾರುಕಿ, ಇವರು ಬದುಕಿದ್ದ ಕಾಲ 12ನೇ ಶತಮಾನವಾಗಿದೆ. ಪಾದರಕ್ಷೆ ಸಿದ್ಧಪಡಿಸುವ 'ಕಾಯಕ' ಇವರದು. ಕಾಯಕದಲ್ಲಿ ಇವರು ಒಮ್ಮೆ ತೊಡಸಿಗಿಸಿಕೊಂಡರೆ ಎದುರಿಗೆ ಯಾವ ವ್ಯಕ್ತಿಯಿದ್ದರೂ ಮಾತನಾಡಿಸಿದರೂ ಅದರ ಬಗ್ಗೆ ಕಿವಿಕೊಡದೆ ಸಮಯದ ಸದುಪಯೋಗವನ್ನು ಮಾಡಿಕೊಳ್ಳುತ್ತಿದ್ದರು.

ಮಾದಾರ ಧೂಳಯ್ಯನು ಕುಷ್ಠರೋಗವನ್ನು ಗುಣಪಡಿಸಿದ ಮಹಿಮೆಯ ಬಗ್ಗೆ ಬಸವ ಪುರಾಣದಲ್ಲಿ ಉಲ್ಲೇಖವಿದೆ. "ಒಮ್ಮೆ ಮನೆಯಿಂದ ತಪ್ಪಿಸಿಕೊಂಡು ಬಂದ ಒಂದು ಹಸುವನ್ನು ಹುಡುಕಿಕೊಂಡು ಬಂದ ಹರಿಗಳಪ್ಪಣ್ಣ ಎಂಬ ಬ್ರಾಹ್ಮಣನು ಧೂಳಯ್ಯನವರ ಮನೆಯ ಕಡೆ ಬರುತ್ತಾನೆ. ಆ ಬ್ರಾಹ್ಮಣನ ಹಸು ಧೂಳಯ್ಯನವರ ಕೊಳಚೆ ನೀರು ಹರಿಯುವ ಬಚ್ಚಲಿನಲ್ಲಿ ಸಿಕ್ಕಿಹಾಕಿಕೊಂಡಿರುತ್ತದೆ. ಅದನ್ನು ಎಳೆಯಲು ಬ್ರಾಹ್ಮಣನು ಬಚ್ಚಲಿನಲ್ಲಿ ಕಾಲಿಟ್ಟಾಗ ಕಾಲು ಮೊಣಕಾಲುವರೆಗೆ ಮುಳುಗಿ ಕೆಸರು ಕಾಲಿಗೆ ಅಂಟಿಕೊಳ್ಳುತ್ತದೆ. ಆದರೂ ಹಸುವನ್ನು ಎಳೆದು ಮೇಲೆತ್ತಿ ಮನೆಗೆ ಕರೆದುಕೊಂಡು ಹೋಗುತ್ತಾನೆ. ಮನೆಯಲ್ಲಿ ಹಸುವನ್ನು ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿ ಕಾಲುಗಳನ್ನು ನೀರಿನಿಂದ ತೊಳೆದುಕೊಳ್ಳುತ್ತಾನೆ. ಆತನ ಕಾಲಿನಲ್ಲಿ ಅಂಟಿದ ಕುಷ್ಟರೋಗದ ಗಾಯ ಮಾಯವಾಗಿ ಕಾಲು ಎಂದಿನಂತೆ ಇದ್ದುದ್ದನ್ನು ನೋಡಿ ಆತನಿಗೆ ಸಂತೋಷವಾಗಿ ಮತ್ತೆ ಧೂಳಯ್ಯನವರ ಮನೆಯ ಹತ್ತಿರ ಬರುತ್ತಾನೆ. ಧೂಳಯ್ಯನವರು ನೋಡು ನೋಡುತ್ತಿರುವಂತೆ ಆ ಬ್ರಾಹ್ಮಣನು ಮನೆಯ ಬಚ್ಚಲಿನ ನೀರಿನಲ್ಲಿ ಮುಖ ಕೈ-ಮೈಗಳನ್ನು ತೊಳೆದುಕೊಳ್ಳುತ್ತಾನೆ. ಇದರಿಂದ ಮುಖ ಮೈ-ಕೈಗಳಲ್ಲಿದ್ದ ಕುಷ್ಟರೋಗದ ಕುರುಹುಗಳು ಮಾಯವಾಗಲು ಇವರೇ ಕಾರಣ ಎಂದು ತಿಳಿದು ಕೂಡಲೇ ನಿಂತಿದ್ದ ಧೂಳಯ್ಯರವರ ಹತ್ತಿರ ಹೋಗಿ ದಿಢೀರನೆ ಅವರ ಕಾಲಿಗೆ ಬಿದ್ದು ಅಷ್ಟಾಂಗ ನಮಸ್ಕಾರ ಮಾಡಿ ನಾನು ಪಾವನವಾದೆ. ನಿಮ್ಮ ಭಕ್ತಿ ಶಕ್ತಿಗಳಿಂದ ಧೂಳಯ್ಯನವರೇ ಎಂದೇಳಿ ಮನೆಗೆ ಹಿಂತಿರುಗುತ್ತಾನೆ."[2]

**"ಉಳಿದವರೆಲ್ಲ ದನದ ಚರ್ಮ ಕೊಯ್ಯುತ್ತಾರೆ**
**ಸತ್ತ ಜೀವ ದನದ ಚರ್ಮ ಕೊಯ್ಯುತ್ತೇನೆ**
**ಅಟ್ಟೆಯ ಕೊಯ್ದು ಮೆಟ್ಟಿಸಿದೆ ಸತ್ಯರಿಗೆಲ್ಲಕ್ಕೂ**
**ಹೊತ್ತು ಹೋದರೆಂತೆಣ್ಣ ಮೆಟ್ಟಡಿಯ ಕೊಂಡರೊಕ್ಕವ ಕೊಡಿ"[3]**

ಈ ವಚನದಲ್ಲಿ ದೂಳಯ್ಯ ತನ್ನ ವೃತ್ತಿಯ ಬಗ್ಗೆ ಗೌರವವನ್ನು ಹೊಂದಿದ್ದರ

ಬಗ್ಗೆ ತಿಳಿದು ಬರುತ್ತದೆ. ತಾನು ಮಾಡಿದ ಚಪ್ಪಲಿಗಳನ್ನು ಕೊಂಡುಕೊಳ್ಳಿರಿ ಹಾಗೆ ಅದಕ್ಕೆ ಹಣವನ್ನು ಕೊಡಿ ಎಂಬ ಮಾತನ್ನು ವಚನಗಳಲ್ಲಿ ವ್ಯಕ್ತಪಡಿಸಿದ್ದಾರೆ.

**"ಅಟ್ಟೆಯ ಚುಚ್ಚುವ ಉಳಿವ ಮೊನೆಯಲ್ಲಿ**
**ಪ್ರತ್ಯಕ್ಷವಾದ ಪರಮೇಶ್ವರನ ಕಂಡು.**
**ಇತ್ತಲೇಕಯ್ಯಾ, ಕಾಯದ ತಿತ್ತಿಯ ಹೊತ್ತಾಡುವನ ಮುಂದೆ?**
**ನಿನ್ನ ಭಕ್ತರ ಠಾವಿನಲ್ಲಿಗೆ ಹೋಗಿ ಮುಕ್ತಿಯ ಮಾಡು**
**ನೀ ಹೊತ್ತ ಬಹುರೂಪ (ದಿ) ತಪ್ಪದೆ**
**ರಜತದ ಬೆಟ್ಟದ ಮೇಲಕ್ಕೆ ಹೋಗು,**
**ನಿನ್ನ ಭಕ್ತರ ಮುಕ್ತಿಯ ಮಾಡು**
**ಕಾಮಧೂಮದೂಳೇಶ್ವರನ ಕರುಣದಿಂದ ನೀನೇ ಬದುಕು"**[4]

ಈ ವಚನದಲ್ಲಿ ಹೀಗೆ ಹೇಳಲಾಗಿದೆ. ಮಾದಾರ ಧೂಳಯ್ಯನು ಚಪ್ಪಲಿ ಹೊಲೆಯುವಾಗ ಚಪ್ಪಲಿಯ ಉಂಗುಟದಲ್ಲಿ ಪರಶಿವನೆ ಪ್ರತ್ಯಕ್ಷನಾಗಿ ಮಾದರ ಧೂಳಯ್ಯನ ಕಣ್ಣ ಮುಂದೆ ನಿಂತಿದ್ದರು. ಅದನ್ನು ಲೆಕ್ಕಿಸದೆ ತನ್ನ ಪಾಡಿಗೆ ತಾನು ಚಪ್ಪಲಿ ಹೊಲಿಯುವ ಕಾಯಕ ಮಾಡುತ್ತಿರುತ್ತಾನೆ. ಆಗ ಶಿವನು ಅಟ್ಟೆಯನ್ನು ಚುಚ್ಚುವ ಉಂಗುಟದ ಒಳಗೆ ಸೇರಿ ಪ್ರತ್ಯಕ್ಷನಾಗುತ್ತಾನೆ. ಆದರೆ ಧೂಳಯ್ಯ ಶಿವನ ಕಡೆಗೆ ಗಮನ ಕೊಡದೆ ಇದ್ದದನ್ನು ಕಂಡು ಶಿವನು ಧೂಳಯ್ಯನಲ್ಲಿ ನನ್ನ ಕಡೆ ಏಕೆ ಮನಸ್ಸು ಕೊಟ್ಟು ನೋಡುತ್ತಿಲ್ಲ ಎಂದು ಕೇಳುತ್ತಾನೆ. ಆಗ ಧೂಳಯ್ಯ ಇತ್ತ ಕಡೆ ನೀನು ಏಕೆ ಬಂದೆ ನಿನ್ನ ಭಕ್ತರು ನಿನಗಾಗಿ ಕಾಯುತ್ತಿದ್ದಾರೆ. ಅಂತವರ ಬಳಿಗೆ ಹೋಗು, ನಾನು ಬಡವ ನನ್ನ ಕೆಲಸಕ್ಕೆ ಅಡ್ಡಿಪಡಿಸಬೇಡ ಇದು ಕೆಲಸದ ವೇಳೆ ಸಮಯವನ್ನು ಹಾಳು ಮಾಡಬೇಡ ನನ್ನ ಕಾಯಕ ಮಾಡಲು ಬಿಡು ಎಂದು ಶಿವನಿಗೆ ಹೇಳಿ ಶಿವನು ಕಾಯಕದ ಸಮಯದಲ್ಲಿ ಬಂದಿದ್ದು ತಪ್ಪು ಎಂದು ಅರಿವಾಗುವಂತೆ ಧೂಳಯ್ಯನು ಮಾಡುತ್ತಾನೆ.

**"ಸುಳಿವ ಅನಿಲಂಗೆ ಮೈಯೆಲ್ಲಾ ಕೈ**
**ಸುಡುವ ಅನಿಲಂಗೆ ಭಾವವೆಲ್ಲ ಬಾಯಿ**
**ಅರಿಯದೆ ಮರೆಯದೆ ಮುಟ್ಟಿ ಹಂಗೆ**
**ಕಡೆನುಡಿ ಮೊದಲೆಂದು ಅರ್ಪಿತವಿಲ್ಲ.**
**ಇಲ್ಲಾ ಎಂಬ ಸೂತಕಕ್ಕೆ ಮುನ್ನವೆ ಇಲ್ಲ.**
**ಕಾಮಧೂಮ ಧೂಳೆಶ್ವರನು"**[5]

ಈ ವಚನದಲ್ಲಿ ಧೂಳಯ್ಯನವರು ಗಾಳಿ ಮತ್ತು ಬೆಂಕಿಯು ಯಾವ ಮನುಷ್ಯ ಜಾತಿಯವನಿಗೂ ಭೇದ-ಭಾವ ಬರುವಂತೆ ಮಾಡುವುದಿಲ್ಲ. ಪ್ರತಿ ಕುಲದವರು ಗಾಳಿ, ಬೆಂಕಿಯ ಉಪಯೋಗವನ್ನು ಪಡೆದಿದ್ದಾರೆ. ಪ್ರತಿಯೊಬ್ಬರ

ಮೈಯನ್ನು ಗಾಳಿಸೋಕುತ್ತದೆ. ಹೀಗೆ ಬೆಂಕಿ–ಗಾಳಿ ಪ್ರಕೃತಿಯಲ್ಲಿರುವ ಪ್ರತಿಯೊಂದು ವಸ್ತುಗಳಿಂದ ಜಾತಿ–ಭೇದವಿಲ್ಲ. ಮನುಷ್ಯ ಜೀವಿಯಲ್ಲಿ ಮಾತ್ರ ಕುಲದ ಗುರುತಿದೆ. ಹಾಗಾಗಿ ಜಾತಿ ನೆಲೆಯಲ್ಲಿ ಯಾರನ್ನು ಹೀಯಾಳಿಸುವುದು ಕೆಟ್ಟದಾಗಿ ನೋಡುವುದನ್ನು ಮಾಡಬಾರದೆಂದು ಹೇಳಿದ್ದಾರೆ.

**"ಅರಿದು ಚುಚ್ಚುವರೆಲ್ಲರೂ ದನದಟ್ಟೆ.**
**ಮರೆದು ಚುಚ್ಚುವರೆಲ್ಲರೂ ದನದಟ್ಟೆ**
**ನಾ ಚುಚ್ಚುವುದೆಲ್ಲ ಸತ್ತ ಜೀವದಟ್ಟೆ**
**ಅಟ್ಟೆಯ ಕೊಯ್ದು ಮೆಟ್ಟಿಸಿದೆ ಸತ್ಯರಿಗೆಲ್ಲಕ್ಕೂ**
**ಎನಗೆ ಬಟ್ಟ ಬಯಲ ತೋರಬೇಕೆಂದು**
**ನಿಮ್ಮ ಬಟ್ಟೆಯಲ್ಲಿ ನೀವೇ ಹೋಗಿ**
**ಎನ್ನ ಬಟ್ಟೆ ಕಾಮಧೂಮ ಧೂಳೇಶ್ವರನ ಬಟ್ಟೆಯೆ ಸಾಕು"[6]**

ಈ ವಚನದಲ್ಲಿ ಧೂಳಯ್ಯನವರು ಸತ್ತ ದನದಿಂದ ತೆಗೆದ ಚರ್ಮದಲ್ಲಿ ಚಪ್ಪಲಿ ಮಾಡುತ್ತಿದ್ದೇನೆ ಎನ್ನುತ್ತಾರೆ. ಮಾದಿಗರು ಉದ್ದೇಶಪೂರ್ವಕವಾಗಿ ದನವನ್ನು ಕೊಲ್ಲುತ್ತಿಲ್ಲ. ಈಗಾಗಲೇ ಸತ್ತಿರುವ ದನದ ಚರ್ಮ ಸುಲಿಯುವ ಕಾರ್ಯ ಮಾಡಿದ್ದಾರೆ. ಆ ಚರ್ಮದಿಂದ ನಾವು ಚಪ್ಪಲಿ ಹೊಲಿಯುತ್ತಿದ್ದೇವೆ ಎಂದು ಹೇಳುತ್ತಾರೆ. ಸಮಾಜದಲ್ಲಿ ಶೋಷಿತರ ಮೇಲೆ ದೌರ್ಜನ್ಯಗಳನ್ನು ಮಾಡುವವರಿದ್ದಾರೆ. ಹಾಗಾಗಿ ನಿಮ್ಮ ಒಳ್ಳೆಯ ನಡತೆಯನ್ನು ಸರಿಯಾದ ಮಾರ್ಗದಲ್ಲಿ ಉತ್ತಮಪಡಿಸಿಕೊಳ್ಳಿರೆಂಬುದು ಧೂಳಯ್ಯನವರ ಆಶಯವಾಗಿದೆ. ಹೀಗೆ ಬಸವಣ್ಣನವರ ಸಮಕಾಲಿನನಾಗಿ ಜೀವಿಸಿದ್ದ ಮಾದಾರ ಧೂಳಯ್ಯನು ಪಾದರಕ್ಷೆಗಳನ್ನು ಹೊಲಿಯುತ್ತಲೇ ತಮ್ಮ ವಚನಗಳ ಮೂಲಕ ಸಮಾಜವನ್ನು ತಿದ್ದುವ ಕಾರ್ಯವನ್ನು ಮಾಡಿದ್ದಾರೆ.

## ಕೊನೆ ಟಿಪ್ಪಣಿಗಳು:

1. ಶಿವಾನಂದ ಕೆಳಗಿನ ಮನಿ (2009). ಮಾದಿಗ ಲಿಂಗಾಯತರು. ಶಿರಡಿ ಸಾಯಿ ಎಂಟರ್ ಪ್ರೈಸಸ್. ಬೆಂಗಳೂರು. ಪು.ಸಂ. 233
2. ನಾರಾಯಣ ಮಳವಳ್ಳಿ ಮ. ಸಿ. (2022). ಆದಿಜಾಂಬವ ವಂಶ (ಕುಲ). ಮಂಜು ಪ್ರಕಾಶನ. ಮಳವಳ್ಳಿ. ಪು.ಸಂ. 84
3. ರಾಜ್ ಕುಮಾರ್ ಕೆ. ಆರ್. ಜೆ. (2012). ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ಮಾದಿಗರು. ಜೈ ಭೀಮ್ ಪ್ರಕಾಶನ. ಕಸ್ತೂರಿ ರಂಗಪ್ಪನ ಹಳ್ಳಿ. ಪು.ಸಂ. 55
4. ಶಿವಾನಂದ ಕೆಳಗಿನ ಮನಿ (2009). ಮಾದಿಗ ಲಿಂಗಾಯತರು. ಶಿರಡಿ ಸಾಯಿ ಎಂಟರ್ ಪ್ರೈಸಸ್. ಬೆಂಗಳೂರು. ಪು.ಸಂ. 234
5. ಶಿವಾನಂದ ಕೆಳಗಿನ ಮನಿ (2009). ಮಾದಿಗ ಲಿಂಗಾಯತರು. ಶಿರಡಿ ಸಾಯಿ ಎಂಟರ್ ಪ್ರೈಸಸ್. ಬೆಂಗಳೂರು. ಪು.ಸಂ. 235
6. ಶಿವಾನಂದ ಕೆಳಗಿನ ಮನಿ (2009). ಮಾದಿಗ ಲಿಂಗಾಯತರು. ಶಿರಡಿ ಸಾಯಿ ಎಂಟರ್ ಪ್ರೈಸಸ್. ಬೆಂಗಳೂರು. ಪು.ಸಂ. 235

## ಪರಾಮರ್ಶನ ಗ್ರಂಥಗಳು:

1. ಮೈಲಹಳ್ಳಿ ರೇವಣ್ಣ (ಸಂ) (2012). ದಲಿತ ಸಂತರು. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು.
2. ಶ್ರೀನಿವಾಸಮೂರ್ತಿ ಎಂ. ಆರ್. (2013). ವಚನ ಧರ್ಮಸಾರ. ಕನ್ನಡ ಸಾಹಿತ್ಯ ಪರಿಷತ್. ಬೆಂಗಳೂರು.
3. ನಾರಾಯಣ ಮಳವಳ್ಳಿ ಮ. ಸಿ. (2022). ಆದಿಜಾಂಬವ ವಂಶ (ಕುಲ). ಮಂಜು ಪ್ರಕಾಶನ. ಮಳವಳ್ಳಿ.
4. ಕಲಬುರ್ಗಿ ಎಂ. ಎಂ. (1978). ಶಾಸನಗಳಲ್ಲಿ ಶಿವಶರಣರು. ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯ ಮಠ. ಗದಗ.
5. ಕೋತಿನ ಎಸ್. ಎಸ್. (ಸಂ) (1986). ಮಾದರ ದೂಳಯ್ಯನ ವಚನಗಳು. ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳಿ, ಮೂರು ಸಾವಿರ ಮಠ. ಹುಬ್ಬಳ್ಳಿ.